**ದಿನಾಂಕಃ 28.07.2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ 1 ರಿಂದ 6 ನೇ ಪ್ರತಿವಾದಿ ಪರ ಶ್ರೀ.ಜಿ.ಬಿ.ಹೆಚ್. ವಕೀಲರಿಂದಃ**

ನಿಪಿ.118 ರಿಂದ 159 ರ ದಾಖಲೆಗಳನ್ನು ಹಾಲಿ ದಾವೆಯನ್ನು ಹಾಕುವ ಕಾಲಕ್ಕೆ ನನ್ನ ಬಳಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳ ಬಗ್ಗೆ ಮೊದಲು ಮಾಹಿತಿ ಗೊತ್ತಿಲ್ಲ ನಂತರ ಗೊತ್ತಾಗಿರುತ್ತದೆ. ನಿಪಿ.118 ರ ಕ್ರಯಪತ್ರದ ಬಗ್ಗೆ ಖುದ್ದು ಮಾಹಿತಿ ಇಲ್ಲ. ಕೆ. ಪೆದ್ದಬೋವಿ ಬಿನ್ ಕೆಂಗ್ ಪೆದ್ದಬೋವಿ ಎಂಬ ಹೆಸರಿರುವ ಆರ್.ಟಿ.ಸಿ.ಯು 1 ರಿಂದ 6 ನೇ ಪ್ರತಿವಾದಿಗಳ ಕುಟುಂಬಕ್ಕೆ ಸೇರಿರುತ್ತದೆ ಎಂದರೆ ಸರಿಯಲ್ಲ. ಪೆದ್ದಬೋವಿ ಎಂಬುವವರು 1 ನೇ ಪ್ರತಿವಾದಿ ತಂದೆ. 1 ನೇ ಪ್ರತಿವಾದಿಯ ತಾತನ ಹೆಸರು ಸಹ ಪೆದ್ದಬೋವಿ ಆಗಿರುತ್ತದೆ. ಪೆದ್ದಬೋವಿ ಬಿನ್ ಪೆದ್ದಬೋವಿ ಎಂಬ ಬಗ್ಗೆ ವಂಶವೃಕ್ಷ, ಆರ್.ಟಿ.ಸಿ. ಮತ್ತು ಖೇತವಾರು ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. 1 ನೇ ಪ್ರತಿವಾದಿಯ ತಾತನ ಹೆಸರು ಕೆ.ಪೆದ್ದಬೋವಿ ಎಂದರೆ ಸರಿಯಲ್ಲ. ನಿಪಿ.120 ರ ವಂಶವೃಕ್ಷವನ್ನು ಕೆ.ಪಿ.ಶ್ರೀನಿವಾಸ್ ರವರು ಜಮೀನಿಗಾಗಿ ಕೊಟ್ಟಿರುತ್ತಾರೆ. ಸದರಿ ಕೆ.ಪಿ.ಶ್ರೀನಿವಾಸ್ ರವರು ಜೀವಂತವಾಗಿರುತ್ತಾರೆ ಎಂದರೆ ಸರಿ. ಸದರಿ ಕೆ.ಪಿ.ಶ್ರೀನಿವಾಸ್ ರವರ ತಂಗಿಯನ್ನು ನಾನು ಮದುವೆಯಾಗಿರುತ್ತೇನೆ ಎಂದರೆ ಸರಿ. ನಿಪಿ.120 ರ ವಂಶವೃಕ್ಷವನ್ನು ಪಡ ಜಮೀನನ್ನು ಲಪಟಾಯಿಸುವ ಉದ್ದೇಶದಿಂದ ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕೆಂಗ ಪೆದ್ದಬೋವಿರವರಿಗೆ ತಂದೆ ಕಡೆಯಿಂದ ಆಸ್ತಿಗಳಾದ ಸ.ನಂ.48, 68/4, 67/2, 27/4 ಮತ್ತು 20/1 ಬಂದಿರುತ್ತದೆ. ಕೂರ್ಲಬೋವಿರವರ ಮಗ ದಾಸಬೋವಿ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಕೂರ್ಲಬೋವಿರವರಿಗೆ ಗಿಡ್ಡಮ್ಮ ಎಂಬ ಒಬ್ಬರೇ ಮಗಳು ಇರುತ್ತಾರೆ. ಕೂರ್ಲಬೋವಿರವರ ತಂದೆ ಹೆಸರು ಜಡೆ ಪೆದ್ದಬೋವಿ. ಕೂರ್ಲಬೋವಿಯನ್ನು ನಮ್ಮ ವಂಶವೃಕ್ಷಕ್ಕೆ ಸೇರಿಸಿರುತ್ತೇವೆ. ಒಳಕಲ್ ಗ್ರಾಮದ ಸ.ನಂ.4 ಮತ್ತು 18 ರ ಜಮೀನು ಮೂಲತಃ ಪೆದ್ದಬೋವಿ ಬಿನ್ ಜಡೆ ಪೆದ್ದಬೋವಿ ರವರಿಗೆ ಸೇರಿರುತ್ತದೆ. ಸದರಿ ಜಮೀನುಗಳಲ್ಲಿ ಚಿಕ್ಕಹನುಮಯ್ಯ ಬಿನ್ ಹನುಮಂತಯ್ಯರವರು ಸ್ವಾಧೀನದಲ್ಲಿರುತ್ತಾರೆ. ಸ.ನಂ.4 ಮತ್ತು 18 ರ ಜಮೀನುಗಳಲ್ಲಿ ಪೆದ್ದಬೋವಿರವರ ಕುಟುಂಬಕ್ಕೆ ಹಕ್ಕು ಮತ್ತು ಸ್ವಾಧೀನ ಇರುವುದಿಲ್ಲ

ಎಂದರೆ ಸರಿಯಲ್ಲ. ಪೆದ್ದಬೋವಿರವರ ಕುಟುಂಬಕ್ಕೆ ಸ.ನಂ.4 ಮತ್ತು 18 ರಲ್ಲಿ ಎಷ್ಟು ಜಮೀನಿನ ಹಕ್ಕು ಇರುತ್ತದೆ ಎಂದು ಗೊತ್ತಿಲ್ಲ. ನಾನು ಗುರುತಿನ ಚೀಟಿಗಳನ್ನು ಚುನಾವಣ ಅಧಿಕಾರಿಗಳಿಂದ ನಕಲು ಪಡೆದಿಲ್ಲ. 1 ನೇ ವಾದಿಯ ಗಂಡ ಈರಯ್ಯ ಬದುಕಿರುತ್ತಾರೆ. ದಾವಾ ಸ್ವತ್ತಿಗೂ ವಾದಿಗಳಾದ ನಮ್ಮ ಕುಟುಂಬಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸುಳ್ಳು ವಂಶವೃಕ್ಷವನ್ನು ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 10 ನೇ ಪ್ರತಿವಾದಿ ಪರ ಶ್ರೀ.ಬಿ.ಎಂ. ವಕೀಲರಿಂದಃ</u>**

ಕೆಂಗ್ ಪೆದ್ದಬೋವಿರವರ ದತ್ತು ಮಗ ಪೆದ್ದಬೋವಿರವರು ರಾಮಣ್ಣನ ಹೆಂಡತಿ ಲಕ್ಷ್ಮಮ್ಮ ರವರಿಗೆ 1 ನೇ ದಾವಾ ಸ್ವತ್ತು ಮಾರಾಟ ಮಾಡಿರುವ ಬಗ್ಗೆ ಎಲ್ಲಿಯೂ ಪ್ರಶ್ನೆ ಮಾಡಿಲ್ಲ. 1 ನೇ ದಾವಾ ಸ್ವತ್ತಿನಲ್ಲಿ ನಮ್ಮ ಕುಟುಂಬಕ್ಕೆ ಯಾವುದೇ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿ. ನಾನು 10 ನೇ ಪ್ರತಿವಾದಿಗೆ ಮತ್ತು ಅವರ ಕುಟುಂಬಕ್ಕೆ ತೊಂದರೆ ಕೊಡಲು ಹಾಲಿ ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 11 ನೇ ಪ್ರತಿವಾದಿ ಪರ ಶ್ರೀ.ಎಸ್.ಬಿ. ವಕೀಲರಿಂದಃ</u>**

11 ನೇ ಪ್ರತಿವಾದಿ 3 ನೇ ದಾವಾ ಸ್ವತ್ತನ್ನು ಕೆ.ಪಿ.ರಾಜು ಬಿನ್ ಪೆದ್ದಬೋವಿರವರು 2003 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಸದರಿ ಕ್ರಯಪತ್ರ ಸುಳ್ಳಾಗಿರುತ್ತದೆ. 11 ನೇ ಪ್ರತಿವಾದಿ ಖರೀದಿ ಮಾಡಿದ ನಂತರ ಅವರು ನಂತರ ಮಕ್ಕಳು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ನನಗೆ 3 ನೇ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲದೇ ಇದ್ದರು ಸಹ ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹೆಚ್ಚುವರಿ ಹಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ಶಿರಾ.